ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 73/2024**

ಪ್ರ.ವ.ಬೋ.ತಾಃ 25-09-2025

ಚಾಸಾಃ 3 ಫ್ರಾಸಾಃ 2

| | |
|---|---|
| ಸಾಕ್ಷಿಯ ಹೆಸರು | ಮದನ್ ಮೋಹನ್ ರೆಡ್ಡಿ |
| ತಂದೆ/ಗಂಡನ ಹೆಸರು | ತಿಮ್ಮಯ್ಯ |
| ವಯಸ್ಸು | 35 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಎಸ್.ಅಪ್ಪೇನಹಳ್ಳಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ದಿಃ 10.07.2024 ರಂದು ಬೆಳಗೆ 6.00 ರಿಂದ 6.30 ಸಮಯದಲ್ಲಿ ನಾನು ನನ್ನ ವಾಹನಕ್ಕೆ ಪೆಟ್ರೊಲ್ ಹಾಕಿಸುವ ಸಲುವಾಗಿ ಬಾಲಾಜಿ ಪೆಟ್ರೋಲ್ ಬಂಕ್ ಗೆ ಹೋಗಿದ್ದು, ಆ ಸಮಯದಲ್ಲಿ ಒಂದು ಕಾರು ಸಂ.ಕೆಎ-05-ಎಂ ಎಫ್-4897 ಇಂಡಿಕಾ ಕಾರು ರಸ್ತೆಯ ಎಡ ಭಾಗದಲ್ಲಿ ನಿಂತಿತ್ತು. ಆ ಸಮಯದಲ್ಲಿ ಮಧುಗಿರಿ ಕಡೆಯಿಂದ ಒಂದು ಕಂಟೈನರ್ ಲಾರಿ ಅತೀ ವೇಗವಾಗಿ ಬಂದು ಆ ಕಾರಿಗೆ ಡಿಕ್ಕಿಪಡಿಸಿತು. ಆ ಕಂಟೈನರ್ ಲಾರಿ ಸಂ. ಕೆಎ-52-ಬಿ-4874 ಆಗಿರುತ್ತದೆ. ಇದರಿಂದ ಲಿಂಗಪ್ಪ ಮತ್ತು ಸಿದ್ದರಾಜುರವರಿಗೂ ಡಿಕ್ಕಿಪಡಿಸಿತು. ಇದರಿಂದ ಲಿಂಗಪ್ಪರವರು ಸ್ಥಳದಲ್ಲಿಯೇ ಮೃತಪಟ್ಟರು. ಸಿದ್ದರಾಜುರವರ ತಲೆಗೆ ಮತ್ತು ಮೈ ಕೈಗೆ ಗಾಯಗಳಾಗಿದ್ದು, ಅವರನ್ನು ಅ ಪೆಟ್ರೋಲ್ ಬಂಕ್ ನಲ್ಲಿದ್ದ ಜನ

ಸರ್ಕಾರಿ ಆಸ್ಪತ್ರೆ ಮಧುಗಿರಿಗೆ ಆಂಬುಲೆನ್ಸ್ ಮೂಲಕ ಕಳುಹಿಸಿಕೊಟ್ಟರು. ಅವರ ಹೆಸರುಗಳು ನನಗೆ ಗೊತ್ತಿಲ್ಲ. ಆ ದಿನ ಅಪಘಾತಕ್ಕೊಳಗಾದ ಕಾರಿಗೆ ಸಂಬಂಧಪಟ್ಟ 4 ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನಿಪಿ.10 ರಿಂದ 13 ಎಂದು ಗುರುತಿಸಲಾಯಿತು. ಅಪಘಾತಪಡಿಸಿದ ಕಂಟೈನರ್ ಲಾರಿಗೆ ಸಂಬಂಧಪಟ್ಟ 4 ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನಿಪಿ.6 ರಿಂದ 9 ಎಂದು ಈಗಾಗಲೇ ಗುರುತಿಸಲಾಗಿದೆ.

ಆ ದಿನ ಅಪಘಾತಪಡಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾನೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ. ಎನ್.ಆರ್. ವಕೀಲರಿಂದಃ–**

ನಾನು ಮತ್ತು ಚಾಸಾ.1 ರವರು ಸಂಬಂಧಿಕರು ಎಂದರೆ ಸರಿಯಲ್ಲ. ಆದರೆ ಒಂದೇ ಊರಿನವರಾಗಿರುತ್ತೇವೆ. ನಮ್ಮ ಊರಿನಿಂದ ಆ ಪೆಟ್ರೋಲ್ ಬಂಕ್ ಸುಮಾರು 14 ಕಿ.ಮೀ. ದೂರದಲ್ಲಿದೆ. ಆ ದಿನ ನಾನು ಬೆಳಗ್ಗೆ 5.45 ರಿಂದ 6.00 ಗಂಟೆ ಸಮಯದಲ್ಲಿ ನಮ್ಮ ಊರಿನಿಂದ ಮಧುಗಿರಿ ಕಡೆಗೆ ಹೊರಟೆನು. ಆ ಪೆಟ್ರೋಲ್ ಬಂಕ್ ಮಧುಗಿರಿ ಕಡೆಯ ರಸ್ತೆಯಿಂದ ಎಡಭಾಗದಲ್ಲಿ 30 ಅಡಿ ದೂರದಲ್ಲಿದೆ. ಅಪಘಾತವಾದ ಸ್ಥಳದಿಂದ ಪೆಟ್ರೋಲ್ ಬಂಕ್ ಸುಮಾರು 40 ಅಡಿ ಒಳಗಿದೆ. ಆ ಸ್ಥಳದಲ್ಲಿ ನಾನು ಪೆಟ್ರೋಲ್ ಹಾಕಿಸುತ್ತಿದ್ದ ಕಾರಣ ನಾನು ಅಪಘಾತ ನೋಡಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವಾದಾಗ ಪೆಟ್ರೋಲ್ ಹಾಕಿಸಿಕೊಂಡು ಮುಂದಕ್ಕೆ ಬಂದಿದ್ದೆನು. ಆ ಸ್ಥಳದಲ್ಲಿ ರಸ್ತೆ ಸುಮಾರು 60 ಅಡಿ ಅಗಲದ

ರಸ್ತೆಯಾಗಿದ್ದು, ರಸ್ತೆ ಮಧ್ಯ ಭಾಗದಲ್ಲಿ ಬಿಳಿ ಪಟ್ಟಿಗಳನ್ನು ಹಾಕಲಾಗಿತ್ತು. ಆ ರಸ್ತೆಯ ಪಕ್ಕದಲ್ಲಿಯೂ ಸಹ 3 ಅಡಿ ರಸ್ತೆ ಬಿಟ್ಟು ಬಿಳಿ ಪಟ್ಟೆ ಹಾಕಲಾಗಿತ್ತು. ಅಪಘಾತವಾದ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ಲಾರಿಯನ್ನು ನೋಡಿಲ್ಲ ಮತ್ತು ಅದರ ಚಾಲಕನನ್ನು ನೋಡಿಲ್ಲ ಎಂದರೆ ಸಾಕ್ಷಿಯು, ಲಾರಿಯನ್ನು ನೋಡಿರುತ್ತೇನೆ ಆದರೆ ಅದರ ಚಾಲಕನನ್ನು ಸರಿಯಾಗಿ ನೋಡಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಆ ರಸ್ತೆಯಲ್ಲಿ ಸಾಮಾನ್ಯವಾಗಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಆ ದಿನ ಆ ರಸ್ತೆಯಲ್ಲಿ ಅಷ್ಟು ಜನರು ಓಡಾಡುತ್ತಿರಲಿಲ್ಲ ಸ್ವತಃ ನುಡಿಯುತ್ತಾರೆ.

ದಿಃ 13.07.2024 ರಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಆ ಸ್ಥಳದಲ್ಲಿ ಇರಲಿಲ್ಲ, ಆ ಅಪಘಾತವನ್ನು ನಾನು ನೋಡಿಲ್ಲ, ಚಾಸಾ.1 ರವರು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಲಿಂಗಪ್ಪ ಮತ್ತು ಸಿದ್ದರಾಜುರವರು ಕಾರಿನ ಎಡಭಾಗದ ಸುಮಾರು 5 ಅಡಿ ದೂರದಲ್ಲಿ ನಿಂತಿದ್ದರು. ಆಗ ಚಾಸಾ.1 ರವರು ಕಾರಿನ ಒಳಗಡೆ ಕುಳಿತಿದ್ದರು.

**ಮರು ವಿಚಾರಣೆಃ– ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

C.C.73/2024
P.W.2

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ